## ನಾಯಿ ಕಚ್ಚುತ್ತಾ?

ಪಪ್ಪು ದಿನಸಿ ತರಲು ಅಂಗಡಿಗೆ ಹೋಗಿದ್ದ. ಅಲ್ಲಿ ಒಂದು ಮುದ್ದಾದ ನಾಯಿಯನ್ನು ಕಂಡ. ಅಂಗಡಿಯವನಿಗೆ, 'ನಿಮ್ಮ ನಾಯಿ ಕಚ್ಚುತ್ತಾ?' ಎಂದು ಕೇಳಿದ. ಅಂಗಡಿಯವ, 'ಇಲ್ಲ, ನಮ್ಮ ನಾಯಿ ಕಚ್ಚುವುದಿಲ್ಲ' ಎಂದು ಉತ್ತರಿಸಿದ. ಆ ಮುದ್ದು ನಾಯಿಯ ಬಳಿ ಸಾರಿದ ಪಪ್ಪು, ಅದರ ತಲೆ ಮೇಲೆ ಕೈಯಾಡಿಸಿ ಅದರ ಮುಸುಡಿಯ ಬಳಿ ಸಾರಿದ. ನಾಯಿ ಅವನ ಮುಖ–ಮೂತಿಯನ್ನು ಎರಡೆರಡು ಬಾರಿ ಕಚ್ಚಿ ಬಿಟ್ಟಿತು. ಪಪ್ಪು ಅಳುತ್ತ ಅಂಗಡಿಯವನಿಗೆ, 'ಏನಯ್ಯ ನೀನು? ನಿನ್ನ ನಾಯಿ ಕಚ್ಚುವುದಿಲ್ಲ ಎಂದೆ?' ಎಂದ. ಅಂಗಡಿಯವ, 'ಹೌದು ಸರ್, ನನ್ನ ನಾಯಿ ಕಚ್ಚುವುದಿಲ್ಲ, ಆದ್ರೆ ಅಲ್ಲಿರೋದು ನನ್ನ ನಾಯಿ ಅಲ್ಲ' ಎಂದ.

**ಅನಿತಾ ವಸ್ತ್ರದ್**



## ಫಿಶ್ ಮಾರ್ಕೆಟ್

ಪಕ್ಕದ ಮನೆಯಲ್ಲಿ ರಾತ್ರಿ ಹಗಲೆನ್ನದೆ ಗಲಾಟೆಯೋ ಗಲಾಟೆ. ಗುಂಡೂರಾಯರಿಗೆ ತಲೆ ಕೆಟ್ಟು ಹೋಯಿತು. ಅದೊಂದು ದಿನ ಬೆಳಿಗ್ಗೆಬೆಳಿಗ್ಗೆಯೇ ಗಲಾಟೆ ಆರಂಭವಾಯಿತು. ಗುಂಡೂರಾಯರು ಎದ್ದವರೇ ಸೀದಾ ಒಂದು ದೊಡ್ಡ ಚೀಲ ಹಿಡಿದು ಪಕ್ಕದ ಮನೆ ಬಾಗಿಲು ಬಡಿದರು. ಒಳಗಿನಿಂದ ಒಬ್ಬ ಆಸಾಮಿ ಬಂದು, 'ಏನು ಬೇಕಿತ್ತು?' ಎಂದು ಕೇಳಿದ. 'ನನಗೆ ಒಂದು ಕೇಜಿ ಫಿಶ್ ಬೇಕು. ಫ್ರೆಶ್ ಆಗಿರೊ ಫಿಶ್ ಆರಿಸಿ ಈ ಚೀಲದಲ್ಲಿ ಹಾಕಿ, ಹಾಗೇ ದುಡ್ಡು ಎಷ್ಟಾಯಿತು ಎಂದು ಹೇಳಿ' ಎಂದರು. ಆಸಾಮಿಗೆ ಕೋಪಬಂದು, 'ರೀ ಸ್ವಾಮಿ, ಇದೇನು ಫಿಶ್ ಮಾರ್ಕೆಟ್ ಅಂದುಕೊಂಡ್ರಾ?' ಎಂದು ಕೇಳಿದ. ಅಷ್ಟರಲ್ಲೇ ಒಳಗಿನಿಂದ ನಾಲ್ಕಾರು ಜನ ತಮ್ಮ ಗಲಾಟೆ ನಿಲ್ಲಿಸಿ ಬಾಗಿಲ ಬಳಿಗೆ ಬಂದರು. ಗುಂಡೂರಾಯರು ಶಾಂತವಾಗಿ, 'ಹೌದಾ, ಇದು ಫಿಶ್ ಮಾರ್ಕೆಟ್ ಅಲ್ವಾ ಹಾಗಾದ್ರೆ? ಇಲ್ಲಿ ಗಲಾಟೆ ಕೇಳಿ ನಾನು ಇದು ಫಿಶ್ ಮಾರ್ಕೆಟ್ ಅಂದುಕೊಂಡು ಬಂದುಬಿಟ್ಟೆ, ಕ್ಷಮಿಸಿ' ಎಂದರು. ಅಂದಿನ ರಾತ್ರಿಯಿಂದಲೇ ಆ ಮನೆಯಲ್ಲಿ ಗಲಾಟೆ ನಿಂತಿತು!



**ಅರವಿಂದ ಬಿರಾದಾರ**